SRI R. GUNDU RAO (Minister for Transport and Tourism).–

(*a*) Basavanabagewadi the birth place of Sri Basaveswara has already been declared as tourist centre.

(*b*) No

Notice about Press Statement of Minister about Muslim Women and Purdah

ಶ್ರೀ ಸಿ.ಎಂ. ಇಬ್ರಾಹಿಂ (ಶಿವಾಜಿನಗರ).—ನಾನು ಕಳೆದ ಅಧಿವೇಶನದಲ್ಲಿ ರೂಲ್ ೩೧೨ರ ಕೆಳಗೆ ಒಂದು ನೋಟೀಸನ್ನು ಕೊಟ್ಟಿದ್ದೆ. ಅದು ಈ ಲಾಗಾಯ್ತು ಬರಲಿಲ್ಲ.

ಅಧ್ಯಕ್ಷರು.—ತಾವು ದಯವಿಟ್ಟು ಆ ಬಗ್ಗೆ ನನ್ನನ್ನು ನನ್ನ ಛೇಂಬರ್‌ನಲ್ಲಿ ಭೇಟಿ ಮಾಡಿ. ಈಗ ಇಲ್ಲಿ ಆ ಬಗ್ಗೆ ಪ್ರಸ್ತಾಪಿಸುವುದು ಬೇಡ.

ಶ್ರೀ ಸಿ ಎಂ. ಇಬ್ರಾಹಿಂ.—ಆ ಬಗ್ಗೆ ನಾನು ಈಗಾಗಲೇ ಈ ಸದನದಲ್ಲಿ ೨–೩ ಬಾರಿ ಕೇಳಿದ್ದೇನೆ. ಆದ್ದರಿಂದ ಅದನ್ನು ಇವತ್ತು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೋ ಇಲ್ಲವೋ ಎಂಬುದನ್ನು ಹೇಳ ಲೇಬೇಕು. ೪೫ ಲಕ್ಷ ಜನರ ಮೇಲೆ ಹೇಳಿಕೆಯನ್ನು ಮಾಡಿರಬೇಕಾದರೆ, ಆ ಬಗ್ಗೆ ನೋಟೀಸ್ ಕೊಟ್ಟು ೧೫ ದಿನಗಳಾದರೂ ಕೂಡ ಅಲ್ಲಿ ಇಲ್ಲಿ ಬಂದು ನೋಡಿ ಎಂದರೆ ಹೇಗೆ ಸಾಧ್ಯ ? ಇವತ್ತು ಮಾನ್ಯ ರಂಗ ನಾಥ್‌ರವರು ಕೂಡ ಇದ್ದಾರೆ. ಮಾನ್ಯ ಹಾವನೂರ್‌ರವರು ಮುಸ್ಲಿಂ ಹೆಣ್ಣು ಮಕ್ಕಳ ಬಗ್ಗೆ, ಮುಸ್ಲಿಂ ಧರ್ಮದಲ್ಲಿ ಹೆಣ್ಣು ಮಕ್ಕಳಿಗೆ ಇರತಕ್ಕ ಸ್ಥಾನಮಾನದ ಬಗ್ಗೆ, ಧರ್ಮಕ್ಕೆ ಚ್ಯುತಿ ಬರತಕ್ಕ ರೀತಿಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಬಗ್ಗೆ ನಾನು ನೋಟೀಸ್ ಕೊಟ್ಟು ೧೫ ದಿವಸವಾಗಿರುವುದರ ಜೊತೆಗೆ ನಾನು ಈಗ ಕೇಳುತ್ತಿರುವುದು ಇದು ಮೂರನೆಯ ಸಲ. We will protest the statement of the concerned Minister. It is our right.

SRI QAMARUL ISLAM. – We want to know whether it is the policy of this Government or it is the personal view of the Minister concerned...

MR. SPEAKER.—I request the hon'ble Members to contact me in my Chamber. I will hear their grievances.

ಶ್ರೀ ಸಿ.ಎಂ. ಇಬ್ರಾಹಿಂ,—ಮಾನ್ಯ ಹಾವನೂರ್‌ರವರು ಇದ್ದಾಗ ತರೋಣವೆಂದರೆ ಅವರು ಈ ಸದನಕ್ಕೆ ಬರುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್.—ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡುತ್ತಿದ್ದಾರೆ ಅದು ಅಜೆಂಡಾದಲ್ಲಿ ಬಂದಿಲ್ಲ ಮತ್ತು ನನ್ನ ಗಮನಕ್ಕೂ ಕೂಡ ಬಂದಿಲ್ಲ. ಮತ್ತು ಮಾನ್ಯ ಮಂತ್ರಿಗಳಿಗೆ ಆರೋಗ್ಯ ಚೆನ್ನಾಗಿಲ್ಲದಿರುವ ಕಾರಣ ಸಭೆಗೆ ಬರುತ್ತಿಲ್ಲ. ಅದನ್ನು ನಾನು ತರಿಸಿ ನೋಡುತ್ತೇನೆ. ಮಾನ್ಯ ಗುಲ್ಬರ್ಗದ ಸದಸ್ಯರು ಕೇಳುತ್ತಿದ್ದರು, ಇದು ಸರ್ಕಾರದ ನೀತಿಯೇ ಎಂದು; ಇದು ಸರ್ಕಾರದ ನೀತಿ ಅಲ್ಲ ಎಂಬುದನ್ನು ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ. ಈಗ ಯಾವ ವಿಚಾರವನ್ನು ಪ್ರಸ್ತಾಪಿಸಿ ದ್ದಾರೋ ಅದನ್ನು ನಾನು ತರಿಸಿನೋಡುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಂತ್ರಿಗಳು ಹೇಳಿಕೆಗಳನ್ನು ಕೊಡಲಿಕ್ಕೆ ಸಂಪೂರ್ಣವಾದ ಅಧಿ ಕಾರ ಇದೆ. ಅವರಲ್ಲಿ ವೈಯಕ್ತಿಕ ಅಭಿಪ್ರಾಯ ಏನು ಇದೆ. ಸರ್ಕಾರದ ಅಭಿಪ್ರಾಯ ಏನು ಇದೆ. ಅದನ್ನು ಈಗ ಸ್ಪಷ್ಟ ಮಾಡತಕ್ಕುದ್ದು ಅವಶ್ಯಕವಾಗಿದೆ. ಇದೇ ರೀತಿ ಕೆಲವು ನೋಟೀಸ್‌ಗಳನ್ನು ಕೊಟ್ಟಿದ್ದೇವೆ. ಮಂತ್ರಿಗಳು ಕೂಡ ಸ್ಟೇಟ್‌ಮೆಂಟನ್ನು ಮಾಡುತ್ತಿದ್ದಾರೆ. ಅನೇಕರು ಜನತಾ ಪಕ್ಷದ ಬಗ್ಗೆ ಮಾತನಾಡುತ್ತಿದ್ದಾರೆ; ಅದು ಬಂದು ನೋಟೀಸ್ ಇದೆ. ಇದೇ ರೀತಿ ವೀರಶೈವರ ಬಗ್ಗೆ, ಐಯ್ಯಂಗಾರರ ಬಗ್ಗೆ ಹಾಗೂ ರಾಜಕೀಯ ಪಕ್ಷಗಳ ಬಗ್ಗೆ ಹೇಳಿದ್ದಾರೆ. ಹೇಳಿಕೊಳ್ಳಲಿ, ಅವು ಅವರ ಸ್ವಾತಂತ್ರ್ಯ. ಮಂತ್ರಿಗಳು ಆ ಸ್ಥಾನಮಾನದಿಂದ ಹೇಳುವುದು ಬೇರೆ ಮತ್ತು ವೈಯಕ್ತಿವಾಗಿ ಹೇಳು ವುದು ಬೇರೆ. ಈಗತಾನೆ ಮಾನ್ಯ ಮಂತ್ರಿಗಳು ಹೇಳಿದರು, ಅದು ಸರ್ಕಾರದ ನೀತಿ ಅಲ್ಲ ಎಂದು.

ಒಟ್ಟಿನಲ್ಲಿ ಹೇಳಿಕೆ ಕೊಟ್ಟಿದ್ದಾರೋ ಇಲ್ಲವೋ, ಅದನ್ನು ಏಕೆ ಕೊಟ್ಟರೂ, ಯಾವ ದೃಷ್ಟಿಯಿಂದ ಕೊಟ್ಟರು ಎಂಬ ಬಗ್ಗೆ ವಿಚಾರಣೆ ಆಗಬೇಕು. ಇಂಥ ವಿಚಾರಗಳು ಬಂದಾಗ ನೋಟೀಸ್ ಕೊಟ್ಟು ೧೫ ದಿವಸಗಳಾದರೂ ಅಜೆಂಡಾದಲ್ಲಿ ಬಾರದಿದ್ದರೆ ಹೇಗೆ ? ತಾವು ಹೇಳುತ್ತೀರಿ, ನೂರರಲ್ಲಿ ಸುಮಾರು ೭೦—೮೦ ಭಾಗದಷ್ಟು ಉತ್ತರವಾಗಿ ಎಂದು.

MR. SPEAKER.—Out of four questions if the hon'ble Members could point out that a particular question or a matter is important I will certainly look into it and as far as possible I will try to get the reply from the Gov rnment.

SRI S. R BOMMAI.—It is for the Legislature Secretariat to find out which are the matters of urgent public importance. ಸಾಮಾನ್ಯವಾಗಿ ಎಲ್ಲ ಸದಸ್ಯರು ಯಾವುದೋ ರಿಕ್ವಾ ಆಕ್ಸಿಡೆಂಟೋ ಮತ್ತಿತರ ಯಾವುದಾದರೂ ಚಿಕ್ಕಪುಟ್ಟ ವಿಚಾರಗಳನ್ನು ಕೇಳಿರುತ್ತಾರೆ; ಅವುಗಳ ಬಗ್ಗೆ ನಾನು ಒತ್ತಾಯ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಮಾನ್ಯ ಸದಸ್ಯರು ಬಹಳ ಮಹತ್ವದ ವಿಷಯದ ಬಗ್ಗೆ ನೋಟೀಸ್ ಕೊಟ್ಟು ೧೫ ದಿವಸವಾಯಿತೆಂದು ಹೇಳುತ್ತಿದ್ದಾರೆ, ಅಂಥಾದಕ್ಕೆ ಮಹತ್ವ ಕೊಟ್ಟು ಜಾಗ್ರತೆಯಾಗಿ ಉತ್ತರ ಬರುವುದಕ್ಕೆ ಪ್ರಯತ್ನ ಮಾಡಬೇಕು. ನಾವು ಈಗಾಗಲೇ ಜೀರೋ ಅವರ ಬೇಡವೆಂದು ಹಾಗೂ ಅದಕ್ಕೆ ಬದಲಾಗಿ ರೂಲ್ ೩೧೨ರ ಕೆಳಗೆ ನೋಟೀಸ್ ಕೊಡದೆ ಚರ್ಚೆ ಮಾಡಿದರೆ ಒಳ್ಳೆಯದಾಗುವುದಿಲ್ಲವೆಂದು ನಾವೆಲ್ಲ ಒಪ್ಪಿಕೊಂಡಿದ್ದೇವೆ. ಇಂಥ ಸಂದರ್ಭದಲ್ಲೂ ಕೂಡ ೧೫ ದಿವಸ ತಿಂಗಳಾದರೂ ಉತ್ತರ ಬಾರದಿದ್ದರೆ ಹೇಗೆ ?

2-00 P. M.

MR. SPEAKER.—Today it has been brought to my notice. I will certainly look into it. ಯಾವ ಸದಸ್ಯರಾಗಿರಲಿ ಇಂಥಾದ್ದು ಬಹಳ ಮುಖ್ಯ ಎಂದು ಎಂದು ಹೇಳಿದರೆ ಅದನ್ನು ತಕ್ಷಣ ಅಜೆಂಡಾದಲ್ಲಿ ಹಾಕಿಸುವುದಕ್ಕೆ ವ್ಯವಸ್ಥೆ ಮಾಡಿಸುತ್ತೇನೆ,

ಶ್ರೀ ಎಸ್. ಆರ್. ಬೊಮ್ಮಾಯಿ.—ನಾಳೆಯಾದರೂ ಈ ವಿಚಾರ ಹಾಕಿಸಬೇಕು ಎಂದು ಕೇಳುತ್ತೇನೆ.

ಶ್ರೀ ಸಿ.ಎಂ. ಇಬ್ರಾಹಿಂ.—ನಾಳೇನೇ ಇದನ್ನು ತೆಗೆದುಕೊಳ್ಳುತ್ತೀರಾ ?

MR. SPEAKER.—This is not the procedure. I have heard you ; I certainly look into it.

ಶ್ರೀ ಸಿ.ಎಂ. ಇಬ್ರಾಹಿಂ.—ನನಗೆ ಮಾನ್ಯ ಅಧ್ಯಕ್ಷರ ಬಗ್ಗೆ ಅಪಾರ ಗೌರವವಿದೆ, ಸಂಪೂರ್ಣವಾದ ವಿಶ್ವಾಸವಿದೆ, ಇದೂ ಸೇರಿ ನಾನು ಐದನೇ ಸಾರಿ ಈ ಬಗ್ಗೆ ಹೇಳುತ್ತಿದ್ದೇನೆ, ನಾಳೆ ಈ ವಿಚಾರ ಸಭೆಯ ಮುಂದೆ ಬರದೇ ಇದ್ದರೆ ನಾವು ಸಭೆಯಲ್ಲಿ ಧರಣಿ ಮಾಡಬೇಕಾಗುತ್ತದೆ.

MR. SPEAKER.—The hon'ble Member has plenty of scope to ventilate his grievances.

ಶ್ರೀ ಸಿ. ಎಂ. ಇಬ್ರಾಹಿಂ.—ಧರ್ಮದ ಮೇಲೆ ಆಗತಕ್ಕ ಅಗೌರವವನ್ನು ತಡೆದುಕೊಳ್ಳುವುದಕ್ಕೆ ನಮಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಬಗ್ಗೆ ಚರ್ಚೆ ತಕ್ಷಣ ಆಗಲೇಬೇಕು.

SRI B. BASAVALINGAPPA.—As the hon'ble Minister for Parliamentary Affairs said, Sri Havanur is not well. The Speaker may take some time after consulting him,

ಶ್ರೀ ಸಿ.ಎಂ. ಇಬ್ರಾಹಿಂ.—ಮಾನ್ಯ ಮಂತ್ರಿಗಳು ರಾಜ್ಯದಲ್ಲಿ ಎಲ್ಲಾ ಕಡೆ ಟೂರ್ ಮಾಡಿ ಕಾರ್ಯಕ್ರಮಗಳಿಗೆ ಅಟೆಂಡ್ ಮಾಡುತ್ತಿದ್ದಾರೆ. ಆದರೆ ಅವರು ಇಲ್ಲಿಗೆ ಬರಲು ಆರೋಗ್ಯ ಸರಿಯಿಲ್ಲವೇ;